## ಅನುವಾದಿತ ಕತೆ

**ಒರಿಯಾ ಮೂಲ: ಗೋಪಿನಾಥ್ ಮೊಹಂತಿ**
**ಕನ್ನಡಕ್ಕೆ: ಡಿ.ಎನ್. ಶ್ರೀನಾಥ್**

ಕಲೆ: ಎನ್. ನವೀನಕುಮಾರ್

# ಹೆಸರು ನೆನಪಿಲ್ಲ

ಹಠಾತ್ತನೆ ಅದೊಂದು ದಿನ ಬೆಳಿಗ್ಗೆ ಎಂಟು ಗಂಟೆಗೆ ಅಶೋಕನಿಗೆ, ತನ್ನ ನೆನಪಿನ ಶಕ್ತಿಯಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ಅನ್ನಿಸಿತು. ಅಂದರೆ ತನಗೆ ಹೆಸರು ನೆನಪಿರುವುದಿಲ್ಲವೆಂದು ಅನ್ನಿಸಿತು. ಅಶೋಕ ಶಿಷ್ಟ ಸಮಾಜದ ವ್ಯಕ್ತಿಯಾಗಿದ್ದ; ಹೊರಗೆ ಹೊರಟರೆ ರಸ್ತೆಗಳು ಮತ್ತು ಗಲ್ಲಿಗಳಲ್ಲಿ ಕಡೇ ಪಕ್ಷ ಆರು ಬಾರಿಯಾದರೂ ಅವನ ಭೇಟಿಯಾಗಬಹುದು. ಅವನು ಅತಿ ವೇಗವಾಗಿ ತನ್ನ ಹಳೆಯ ಹರ್ಕ್ಯೂಲಿಸ್ ಸೈಕಲ್ ಏರಿ ಗುಂಪನ್ನು ಸೀಳುತ್ತಾ ಸರ ಸರನೆ ಹೋಗುವುದನ್ನು ನೋಡಬಹುದು. ಆರೋಗ್ಯವಂತ ಮತ್ತು ಸುಂದರ ಯುವಕನಾಗಿದ್ದ ಅವನು ಸೈಕಲ್ ಚಾಲನೆ ಮಾಡುವಲ್ಲಿ ನಿಪುಣನಾಗಿದ್ದ. ಸೈಕಲ್ಲಿನ ಹಳೆಯ ಹ್ಯಾಂಡಲ್ ಮೇಲೆ ಬಿಳಿಯ ಚಕಚಕನೆ ಹೊಳೆಯುವ, ಗೋಲಾಕಾರದ ಗಂಟೆ, ಟಾಂಗಾದ ಗಂಟೆಯಂತೆ ಥಣ್–ಥಣ್, ಥಣ್–ಥಣ್ ಎಂದು ಗಟ್ಟಿಯಾಗಿ ಧ್ವನಿಗೈಯುತ್ತಿತ್ತು. ಬೀಡಾ ಅಂಗಡಿಯಲ್ಲಿ ಸಿಗರೇಟಿನ ಹೊಸ ಪ್ಯಾಕ್ ಖರೀದಿಸುತ್ತಲೋ, ರಸ್ತೆಯಲ್ಲಿ ಸೈಕಲ್‌ಗೆ ತನ್ನ ಬೆನ್ನು ಆನಿಸಿ ಕೆಲವು ಸ್ನೇಹಿತರನ್ನು ಒಟ್ಟುಗೂಡಿಸಿ ತನ್ನ ರಾಜ್ಯದ ವಿಭಿನ್ನ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಆವೇಶದ ಭಾಷಣ ಬಿಗಿಯುತ್ತಿರುವುನ್ನೋ, ಜನರ ಅಭಿಪ್ರಾಯಗಳನ್ನು ಕೇಳುತ್ತಲೋ, ಗೋಲಾಕಾರದ ಮುಖದಲ್ಲಿ ಚಿಟ್ಟೆಯಾಕಾರದ ಮೀಸೆಯ ಕೆಳಗೆ ಶ್ವೇತ ಹಲ್ಲುಗಳ ನಡುವೆ, ಸಿಗರೇಟಿನ ಹೊಗೆಯನ್ನು ಕಾರುತ್ತಲೋ ಇರುವ ಅವನನ್ನು ದೂರದಿಂದಲೇ ಗುರುತಿಸಬಹುದು. ಏಕೆಂದರೆ ಅನೇಕ ಜನರು ಸೇರುವ ಜಾಗದಲ್ಲಿ ಇವನದು ಎತ್ತರ ನಿಲುವಾಗಿದ್ದು, ಎದೆ ಅಗಲವಾಗಿದೆ. ಅವನು ಸೈಕಲ್ ಹಿಡಿದು, ಎದೆಯುಬ್ಬಿಸಿ ಮಾರ್ಚ್ ಮಾಡುವ ಭಂಗಿಯಲ್ಲಿ, ಒಂದು ಚಿಕ್ಕ ಗುಂಪಿನೊಂದಿಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರೆ, ನಡು ರಸ್ತೆಯಿಂದ, ರಸ್ತೆಯ ಬದಿಯಿಂದ, ಮನೆಯ ಜಗುಲಿಯಿಂದ ಅಥವಾ ಸಾಗುವ ವಾಹನಗಳಿಂದ ಇವನೆಡೆಗೆ ಧ್ವನಿಯೊಂದು ತೂರಿಬರುತ್ತದೆ – "ನಮಸ್ಕಾರ ಅಶೋಕ್ ಬಾಬು, ನಮಸ್ಕಾರ, ನಮಸ್ಕಾರ!"

ಇಂಥ ವ್ಯಕ್ತಿಯ ನೆನಪಿನ ಶಕ್ತಿ ಕ್ಷೀಣಿಸಿದರೆ ಹಾಗೂ ಅವನಿಗೆ ಹೆಸರು ನೆನಪಿಲ್ಲದಿದ್ದರೆ, ಖಂಡಿತವಾಗಿಯೂ ಪರಿಸ್ಥಿತಿ ಬಿಗಡಾಯಿಸುತ್ತದೆ.

ಅವನ ನೆನಪಿನ ಶಕ್ತಿಯಲ್ಲಿ ಬೇರಾವ ಪರಿವರ್ತನೆಯಾಗದಿದ್ದಾಗ್ಯೂ, ಹೆಸರು ಮರೆಯುವುದು ಸಾಮಾನ್ಯವಾಗಿದೆ. ಅವನು ಪರಿಸ್ಥಿತಿಗಳ ಬಗ್ಗೆ ಪೂರ್ಣವಾಗಿ ಎಚ್ಚರಗೊಂಡಿದ್ದ, ಅನೇಕ ವಿಷಯಗಳ ಬಗ್ಗೆ ಅವನಿಗಿದ್ದ ತಿಳಿವಳಿಕೆ ನಾಶವಾಗಿರಲಿಲ್ಲ; ಈ ಮೊದಲಿನಂತೆ ಅವನು ವಕಾಲತ್ತು ಮಾಡುತ್ತಿದ್ದಾನೆ, ಅಲ್ಪ ಸ್ವಲ್ಪ ಖರೀದಿಸುವುದು–ಮಾರುವುದು, ರಾಜಕೀಯ ಚರ್ಚೆಗಳು ಹಾಗೂ ಅವುಗಳೊಂದಿಗೆ ಸಂಬಂಧಿಸಿದವರ ಹೆಸರನ್ನು ಸಹ ಅವನು ಮರೆತಿಲ್ಲ; ಪರ್ವತದ ಹೆಸರು ಹಿಮಾಲಯ, ದೇಶದ ಹೆಸರು ಭಾರತ, ನದಿಯ ಹೆಸರು ಮಹಾನದಿ ಹಾಗೂ ಇದೇ ರೀತಿಯಲ್ಲಿ ದೇಶದ ಗಣ್ಯಮಾನ್ಯ ವ್ಯಕ್ತಿಗಳ ಹೆಸರನ್ನು ಸಹ ಮರೆತಿಲ್ಲ. ಚರ್ಚೆಯ ಮಧ್ಯೆ, ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಮುದ್ರಣಗೊಂಡ ಹೆಸರು ಅವನಿಗೆ ಚೆನ್ನಾಗಿ ನೆನಪಿದೆ. ಅವನು 'ಷೇರ್' ಮತ್ತು 'ಖರೆ' ಎಂಬ